ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹೊಸಕೋಟೆಯಲ್ಲಿ ನಾರಾಯಣಗೌಡ ಎಂಬುವವರ ಕೊಲೆಯಾಗಿದೆ ಆ ಬಗ್ಗೆ ಮುಖ್ಯಮಂತ್ರಿಗಳ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ.

ಗೊಂದಲ

ಅಧ್ಯಕ್ಷರು : ದಯಮಾಡಿ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು, ಪ್ರತಿ ದಿನ ಈ ತರಹ ಆದರೆ ಹೇಗೆ? ಹೀಗಾದರೆ ಸಂಜೆ 5 ಗಂಟೆಯವರೆಗೆ ನಡೆಸಿಕೊಂಡು ಹೋಗಬಹುದು, ನಾನು ಈ ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾವು ಈ ಕಡೆ ಇರುವ ವಿರೋಧ ಪಕ್ಷದವರು ನಿಮಗೆ ಒಂದು ಸಲಹೆ ಕೊಡುತ್ತೇವೆ, ನಾವು ಈ ಕಡೆ ಇರುವ ವಿರೋಧ ಪಕ್ಷದವರು ಹೊರಗಡೆ ಇರುತ್ತೇವೆ, ಆಡಳಿತಪಕ್ಷದವರಿಗೆ ಅವರ ಮುಖ್ಯಮಂತ್ರಿಯವರನ್ನು ಕಂಡು ಉತ್ತರ ತೆಗೆದುಕೊಳ್ಳಲಾಗುತ್ತಿಲ್ಲ, ಸದನದಲ್ಲಿ ಉತ್ತರ ಬೇಕು, ಅವರು ಉತ್ತರ ಕೊಟ್ಟ ಮೇಲೆ ನಾವು ಬರುತ್ತೇವೆ. ಅವರು ಉತ್ತರ ಡಿಮ್ಯಾಂಡ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ;

ಗೊಂದಲ

(ಈ ಸಂದರ್ಭದಲ್ಲಿ ಸದಸ್ಯರಾದ ಶಿವರಾಜ್ ಸಜ್ಜನರ್ ಮಾತನಾಡಲು ಅವಕಾಶ ಕೊಡಬೇಕೆಂದು ಒತ್ತಾಯಿಸಿ ಸದನದ ಬಾವಿಗೆ ಬಂದು ನಿಂತರು, ನಂತರ ತಮ್ಮ ಸ್ಥಾನಕ್ಕೆ ತೆರಳಿದರು)

ಅಧ್ಯಕ್ಷರು : ಚೀಫ್ ವಿಪ್‌ರವರೆ ನಿಮ್ಮ ಸದಸ್ಯರನ್ನು ಸರಿಯಾದ ರೀತಿಯಲ್ಲಿ ನಿಯಂತ್ರಣದಲ್ಲಿಡಿ, ಇಷ್ಟ ಬಂದಂತೆ ಇಲ್ಲಿ ಕೂಗಾಡುವುದಕ್ಕಾಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ನಿಯಮ 69ರ ಅಡಿಯಲ್ಲಿ ಭೂ ಹಗರಣದ ಬಗ್ಗೆ ಸದಸ್ಯರುಗಳು ಮಾತನಾಡಬೇಕು, ನಂತರ ಮುಖ್ಯಮಂತ್ರಿಗಳಿಂದ ಹಾಗೂ ಸಂಬಂಧಪಟ್ಟವರಿಂದ ಉತ್ತರ ಆದಾದ ಮೇಲೆ ಕೂಲಿಗಾಗಿ ಕಾಳು ಬಗ್ಗೆ ಮಾನ್ಯ ರಾಮಸ್ವಾಮಿ ಹಾಗೂ ಇತರೆ ಸ್ನೇಹಿತರು ಮಾತನಾಡಲು ಬಹಳ ದಿವಸಗಳಿಂದ ಕಾಯುತ್ತಿದ್ದಾರೆ, ಅದು ಪಟ್ಟಿಯಲ್ಲಿದೆ, ಆದಾದ ಮೇಲೆ ಮಾನ್ಯ ಯಡಿಯೂರಪ್ಪ ಮತ್ತು ಅವರ ಸ್ನೇಹಿತರು ಕೃಷ್ಣಾ ಕೊಳ್ಳದ ಭಾಗದ ನೀರಿನ ವಿಚಾರದಲ್ಲಿ ನಿಯಮ 69ರಲ್ಲಿ ಚರ್ಚೆ ಮಾಡಬೇಕೆಂದಿದ್ದಾರೆ, ಇಡೀ ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಬಹಳ ಗಂಭೀರವಾದ ವಿಚಾರಗಳಿದ್ದಾವೆ, ಅದಕ್ಕೋಸ್ಕರ ಎಲ್ಲಾ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಶೂನ್ಯವೇಳೆಯಲ್ಲಿ ಕೆಲವು ಸದಸ್ಯರು ನಮ್ಮ ಪ್ರಶ್ನೆ ಕೇಳಬೇಕು ಎಂದು ಕೇಳುತ್ತಿದ್ದಾರೆ, ಅದಕ್ಕೆ ಈ ದಿವಸ ಅದನ್ನು ತೆಗೆದುಕೊಳ್ಳದೆ ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಹೋದರೆ ತಾವೆಲ್ಲಾ ಈ ಗಂಭೀರವಾದ ವಿಚಾರಗಳನ್ನು ಚರ್ಚೆ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಎಲ್ಲಾ ಸದಸ್ಯರಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಈಗ ನಿಯಮ 69 ಅಡಿಯಲ್ಲಿ ಚರ್ಚೆ.

ಗೊಂದಲ

ಮಾನ್ಯ ಸದಸ್ಯರೊಬ್ಬರು : ನಾವು ಬಹಳ ಗಂಭೀರವಾದ ನಮ್ಮ ಕ್ಷೇತ್ರದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇವೆ, ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತಲೆ ಇದ್ದೇವೆ.

ಅಧ್ಯಕ್ಷರು : ಅನೇಕ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕೆಂದು ಬರೆದು ಕಳುಹಿಸಿದ್ದಿರಿ, ನನ್ನ ಕೊಠಡಿಯಲ್ಲಿ ಬಂದು ಕಂಡಿದ್ದೀರಿ, ಆದರೆ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡೋಣ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಹಿರೇಕೆರೂರು ತಾಲ್ಲೂಕಿನಲ್ಲಿ ನಡೆದಂತಹ ಘಟನೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದು, ತಾವು ಸರ್ಕಾರದಿಂದ ವರದಿಯನ್ನು ತರಿಸಿಕೊಂಡು ಕ್ರಮ ಜರುಗಿಸುತ್ತೇವೆಂದು ಹೇಳಿದ್ದೀರಿ, ದಯಮಾಡಿ ಏನು ಕ್ರಮ ಜರುಗಿಸಿದ್ದೀರೆಂಬುದನ್ನು ತಿಳಿಸಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನಾನು ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಬಹಳ ಸದಸ್ಯರು ತಮ್ಮ ತಮ್ಮ ಬಹಳ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸಎಳೆಯಬೇಕೆಂದಿದ್ದೀರಿ, ಆದರೆ ಕಾಲಾವಕಾಶವಿಲ್ಲದಿರುವುದರಿಂದ, ದಯಮಾಡಿ ಎಲ್ಲರೂ ಸಹಕರಿಸಬೇಕು. ಶೂನ್ಯವೇಳೆಯಲ್ಲಿ ವಿಚಾರಗಳನ್ನು ತೆಗೆದುಕೊಳ್ಳುವುದು ನಮ್ಮದು, ನೀವು ಇಷ್ಟಬಂದಂತಹ ರೀತಿಯಲ್ಲಿ ವರ್ತನೆ ಮಾಡುವುದಕ್ಕಾಗುವುದಿಲ್ಲ.

ಗೊಂದಲ

ಶ್ರೀ ಧರ್ಮಸಿಂಗ್ : ಅವರು ಪ್ರಸ್ತಾಪ ಮಾಡಲಿ ಬಿಡಿ, ನಾಲ್ಕೈದು ಸದಸ್ಯರಿದ್ದಾರೆ, ಇವತ್ತು ಕೊನೆಯ ದಿನವಾಗಿದೆ, ಅವಕಾಶ ಕೊಡಿ ಹೇಳುತ್ತಾರೆ.

ಮಾನ್ಯ ಸದಸ್ಯರು : ಇವತ್ತು ಚರ್ಚೆಗೆ ಅವಕಾಶ ಕೊಟ್ಟು ಮಿಕ್ಕ ವಿಷಯಗಳ ಬಗ್ಗೆ ನಾಳೆ ಮಾತನಾಡಲು ನಾಳೆಗೆ ಸದನವನ್ನು ಮುಂದೂಡಿ.

ಅಧ್ಯಕ್ಷರು : ಈಗ ಕೆಲವೊಂದು ಗಂಭೀರವಾದ ವಿಚಾರಗಳಿದ್ದಾವೆ, ಅವನ್ನು ಬಿಡೋಣವೆಂದರೆ ನನ್ನದೇನೂ ಅಭ್ಯಂತರವಿಲ್ಲ 5 ಗಂಟೆಯವರೆಗೆ ಸದನ ನಡೆಸುತ್ತೇನೆ, ಯಾವುದು ರೀಚ್ ಆಗುತ್ತದೆ ರೀಚ್ ಆಗಲಿ, ಹೋದದ್ದು ಹೋಗಲಿ ನಮಗೇನಿಲ್ಲ, ಇಲ್ಲಿ ಸಭಾನಾಯಕರು, ವಿರೋಧ ಪಕ್ಷದ ನಾಯಕರಿದ್ದಾರೆ ನೀವೆಲ್ಲಾ ನಿಮ್ಮ ಸದಸ್ಯರುಗಳಿಗೆ ಹೇಳಬೇಕು. ಇದನ್ನು ತೆಗೆದುಕೊಳ್ಳೋಣವೆಂದರೆ ತೆಗೆದುಕೊಳ್ಳೋಣ, ಚರ್ಚೆ ನಡೆಯಲಿ, ಎಲ್ಲರನ್ನೂ ಕೇಳಬೇಕೆಂದರೆ ಬಹುಶ: ಇದರಲ್ಲಿ 5 ಗಂಟೆಯಾಗುತ್ತದೆ ಯಾವ ಚರ್ಚೆಯೂ ನಡೆಯುವುದಿಲ್ಲ ನಾನೇನು ಮಾಡುವುದಕ್ಕಾಗುವುದಿಲ್ಲ. ಶೂನ್ಯವೇಳೆಯಲ್ಲಿ ಅವರೊಬ್ಬರು ಕೇಳುತ್ತಾರೆಂದರೆ ಅವರಿಗೇನು ಕಿರೀಟ ಇದೆಯಾ? ಎಲ್ಲರೂ ಕೇಳುತ್ತಾರೆ ಅದಕ್ಕೆ ನಾನೇನು

ಮಾಡುವುದು? ಏನಾದರೂ ಅರ್ಥವಿದೆಯಾ, ಜಾಸ್ತಿ ಮಾಡುವುದಕ್ಕೆ ನನಗೆ ಅಧಿಕಾರವಿಲ್ಲ, ಬಿಎಸಿಯಲ್ಲಿ ತೀರ್ಮಾಣವಾಗಿದೆ, ಅಲ್ಲಿ ತೀರ್ಮಾನವಾದ ರೀತಿಯಲ್ಲಿ ನಾನು ಕಾರ್ಯಕ್ರಮವನ್ನು ನಡೆಸಬೇಕು, ಎಲ್ಲರೂ ತಮ್ಮ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳಲು ಸಾಧ್ಯವಾದರೆ ಹೇಗೆ?

ಶ್ರೀ ಬಿ.ಸಿ. ಪಾಟೀಲ್ : ನಿನ್ನೆಯ ದಿವಸ ಪ್ರಸ್ತಾಪ ಮಾಡಿದ್ದೇವೆ, ಉತ್ತರ ಕೊಡುತ್ತೇವೆಂದು ಹೇಳಿದ್ದರು, ದಯಮಾಡಿ ಸರ್ಕಾರ ಏನು ಕ್ರಮ ಜರುಗಿಸಿದೆ ಎನ್ನುವುದನ್ನು ತಿಳಿಸಬೇಕು.

ಗೊಂದಲ

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಈಗ 12-45 ಗಂಟೆ. ನಾನು ಎರಡು ಗಂಟೆಯವರೆಗೂ ಶೂನ್ಯವೇಳೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ. ನೀವೆಲ್ಲಾ ಒಪ್ಪಿಕೊಂಡರೆ. ಅದಾದಮೇಲೆ ಮೂರು ಗಂಟೆಯಿಂದ ಆರು ಗಂಟೆ, ಆರೂವರೆ ಗಂಟೆಯವರೆಗೆ ಈ ಮೂರು ಪ್ರಸ್ತಾವಗಳೇನು ಇದ್ದಾವೆ, ಅವುಗಳನ್ನು ಮುಗಿಸುವುದಕ್ಕೆ ಪ್ರಯತ್ನವನ್ನು ಮಾಡೋಣ. ಇವೆಲ್ಲಾ ಬಹಳ ಗಂಭೀರವಾದವುಗಳೇ. ಮಾನ್ಯ ಸದಸ್ಯರುಗಳು ಈಗ ಎಲ್ಲಾ ವೆಲ್‌ಗೆ ಬರುತ್ತಿದ್ದಾರಲ್ಲಾ. ಈಗ ಏನೆಂದರೆ ಸಭೆ ನನಗೆ ನಿರ್ದೇಶನವನ್ನು ನೀಡಬೇಕು. ಬಹಳ ಜನರು ತಾವು ಹೇಳಿದ್ದನ್ನೇ ಹೇಳುತ್ತಿದ್ದೀರಿ. ನಾನು 15 ಜನರಿಗೆ ಒಂದು ಗಂಟೆಗಳ ಕಾಲ ಶೂನ್ಯ ವೇಳೆಯಲ್ಲಿ ಪ್ರಮುಖವಾದ ವಿಚಾರಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ. ಈಗ ನಾನು 15 ಜನರಿಗೆ ಅವಕಾಶ ಕೊಡಬಹುದು. ಆಮೇಲೆ ಏನು ನಿಯಮ 69ರ ಕೆಳಗೆ ಬಹಳ ಮುಖ್ಯವಾಗಿರುವ ಗಂಭೀರವಾದ ಸಮಸ್ಯೆಗಳು ಇದ್ದಾವೆ, ಅದರ ಮೇಲೆ ಚರ್ಚೆಯನ್ನು ಮಾಡೋಣ. ಇದಕ್ಕೆಲ್ಲಾ ತಮ್ಮಗಳ ಒಪ್ಪಿಗೆ ಇದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಈಗ ಮಾನ್ಯ ಬಿ.ಆರ್. ಪಾಟೀಲರು. ಅವರದು ಬಹಳ ಗಂಭೀರವಾದ ವಿಚಾರ ಇದೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಮಸ್ಯೆಗಳನ್ನು ಕೇಳುತ್ತೀರಿ, ನಾವು ಉತ್ತರ ಕೇಳಿದರೆ ಉತ್ತರವನ್ನು ಕೊಡುತ್ತಿಲ್ಲ. ಬರೀ ಸಮಸ್ಯೆಗಳನ್ನು ಕೇಳಿಕೊಂಡು ಹೋದರೆ ಏನಾಗುತ್ತದೆ? ನಾವು ಕೇಳಿದ ಪ್ರಶ್ನೆಗೆ ಇದುವರೆಗೂ ಉತ್ತರವೇ ಬರಲಿಲ್ಲ.

ಅಧ್ಯಕ್ಷರು : ಉತ್ತರವನ್ನು ಕೊಡುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಕೊಡುತ್ತಾರೆ. ದಯಮಾಡಿ ಸಹಕರಿಸಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ಉಪ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಅಪ್ಪಣೆಯನ್ನು ಪಡೆದು ಉತ್ತರವನ್ನು ಹೇಳಿದ್ದಾರೆ. ಎಲ್ಲಿ ತೊಂದರೆಯಾಗಿದೆ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಬಿ.ಸಿ. ಪಾಟೀಲರ ಅನಿಸಿಕೆ ಏನು ಇದೆ, ಅದರ ಬಗ್ಗೆ ನಾವು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.